ಪತ್ರಿಕಾ ತುಣುಕುಗಳು

**PAPER CLIPPINGS**

27

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 23/1/21

## ಅಸಮಾಧಾನಗೊಂಡ ನಾಯಕರ ಜತೆ ಮುಖ್ಯಮಂತ್ರಿ ಯಡಿಯೂರಪ್ಪ ಸಭೆ

# ಖಾತೆ ಮುನಿಸು ತಣಿಸಿದ ಸಿಎಂ

■ **ವಿಕ ಸುದ್ದಿಲೋಕ** ಬ್ಯೂರೊ 23.1.21

ಖಾತೆ ಬದಲಾವಣೆಯಿಂದ ಅಸಮಾಧಾನ ಹೊಂದಿರುವವರ ಜತೆ ಸಿಎಂ ಯಡಿಯೂರಪ್ಪ ಮಾತುಕತೆ ನಡೆಸಿ ಮನವೊಲಿಸಿದ್ದಾರೆ ಎಂದು ತಿಳಿದು ಬಂದಿದೆ.

ಸಿಎಂ ನೀಡಿದ ಭರವಸೆಗೆ ಸಚಿವ ಆರ್. ಶಂಕರ್, ಶಿವರಾಮ್ ಹೆಬ್ಬಾರ್, ಎಂಟಿಬಿ ನಾಗರಾಜ್ ಅಸಮಾಧಾನ ಬಹುತೇಕ ತಿಳಿಯಾಗಿತ್ತು. ಆದರೆ ಮಾಧುಸ್ವಾಮಿ, ಡಾ. ಸುಧಾಕರ್ ಮುನಿಸಿಕೊಂಡಿದ್ದರು.

ಈ ಮಧ್ಯೆ ಗುರುವಾರ ರಾತ್ರಿ ಕೆಲವು ಬಿಜೆಪಿ ಶಾಸಕರು ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ಅವರ ನಿವಾಸದಲ್ಲಿ ರೇಣುಕಾಚಾರ್ಯ, ರಾಜುಗೌಡ, ಮಹೇಶ್ ಕುಮಠಳ್ಳಿ, ಶಿವರಾಜ್ ಪಾಟೀಲ್ ಮತ್ತಿತರರು ಸಭೆ ಸೇರಿ ರಾಜಕೀಯ ಚರ್ಚೆ ನಡೆಸಿದ್ದಾರೆನ್ನಲಾಗಿದೆ. ಆದರೆ ಸಭೆ ಸೇರಿದ್ದನ್ನು ನಿರಾಕರಿಸಿರುವ ಶಾಸಕ ರೇಣುಕಾಚಾರ್ಯ ಒಟ್ಟಿಗೆ ಊಟಕ್ಕೆ ಸೇರಿದ್ದೇವು ಎಂದು ಸ್ಪಷ್ಟನೆ ನೀಡಿದ್ದಾರೆ.

ಸಚಿವ ಮಾಧುಸ್ವಾಮಿ ಹಾಗೂ ಸಂಪುಟದಲ್ಲಿ ಅವಕಾಶ ಪಡೆಯದಿರುವ ಶಾಸಕ ಮುನಿರತ್ನ ಅವರು ಪ್ರತ್ಯೇಕವಾಗಿ ಸುತ್ತೂರುಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳನ್ನು ಮೈಸೂರಿನಲ್ಲಿ ಭೇಟಿ ಮಾಡಿ ಚರ್ಚೆ ನಡೆಸಿದರು. ಮಾಧುಸ್ವಾಮಿ ಅವರ ಬಳಿಯಿದ್ದ ಕಾನೂನು ಮತ್ತು ಸಂಸದೀಯ ಹಾಗೂ ಸಣ್ಣ ನೀರಾವರಿ ಖಾತೆಯನ್ನು ಮರು ಹಂಚಿಕೆ ಸಂದರ್ಭ ಹಿಂಪಡೆದು ವೈದ್ಯಕೀಯ ಶಿಕ್ಷಣ ಖಾತೆಯನ್ನು ನೀಡಿದ್ದಾರೆ. ಇದರಿಂದ ಮಾಧುಸ್ವಾಮಿ ಅಸಮಾಧಾನಗೊಂಡಿದ್ದು, ಸಂಪುಟ ಸಭೆಗೂ ತೆರಳಿರಲಿಲ್ಲ. ತುಮಕೂರಿನಲ್ಲಿ ಸಿಎಂ ಸಭೆಯಲ್ಲೂ ಹಾಜರಿರಲಿಲ್ಲ. ಶ್ರೀಗಳ ಬೇಟಿ ಮಾಡಿ ಮಾಧುಸ್ವಾಮಿ ಹೊರಬಂದ ನಂತರ ಮುನಿರತ್ನ ಭೇಟಿ ಮಾಡಿದರು. ನಂತರ ಸುದ್ದಿಗಾರರ ಜತೆ ಮಾತನಾಡಿದ ಮಾಧುಸ್ವಾಮಿ ''ನಾನು ಗ್ರಾಮೀಣ ಪ್ರದೇಶದವನು.



### ಬೇಸರ ಇತ್ತು, ಬಗೆಹರಿದಿದೆ

**ಬೆಂಗಳೂರು: ಪೌರಾಡಳಿತ ಖಾತೆ ವಾಪಸ್ ಪಡೆದಿದ್ದಕ್ಕೆ ಬೇಸರವಾಗಿದ್ದು, ಸಿಎಂ ಮುಂದಿನ ದಿನದಲ್ಲಿ ಬೇರೆ ಖಾತೆ ಕೊಡುವ ಭರವಸೆ ನೀಡಿದ್ದಾರೆ ಎಂದು ಸಚಿವ ಆರ್. ಶಂಕರ್ ಹೇಳಿದ್ದಾರೆ. ''ಸಿಎಂ ಭೇಟಿ ಮಾಡಿ ನೋವು ಅಸಮಾಧಾನ ತೋಡಿಕೊಂಡಿದ್ದೆ. ಜನವರಿ 26ರಂದು ಧ್ವಜಾರೋಹಣ ಆದ ನಂತರ ಹಾವೇರಿ ಜಿಲ್ಲಾ ಉಸ್ತುವಾರಿ ನೀಡುವುದಾಗಿ ಸಿಎಂ ಭರವಸೆ ನೀಡಿದ್ದರಿಂದ ಮಾತಿಗೆ ಒಪ್ಪಿ ವಿಧಾನಸೌಧಕ್ಕೆ ಬಂದಿದ್ದೇನೆ,'' ಎಂದು ಹೇಳಿದರು.**

### ಆಪರೇಷನ್ ಶಾಸಕರ ರಾಜಕೀಯ ಸಮಾಧಿ

**ಬೆಂಗಳೂರು:** ಬಿಜೆಪಿಯಲ್ಲಿ ಯೂಸ್ ಆ್ಯಂಡ್ ಥ್ರೋ ರೀತಿ ಬಳಸುತ್ತಾರೆ, ರಾಜಕೀಯ ಸಮಾಧಿಯಾಗುತ್ತೀರಿ ಎಂದು ವಿಧಾನಸಭೆಯಲ್ಲೇ ನಾನು ಹೇಳಿದ್ದು ಈಗ ನಿಜವಾಗುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೂತನ ಸಚಿವರ ಕಾಲೆಳೆದಿದ್ದಾರೆ. ಖಾತೆ ಹಂಚಿಕೆಯ ನಂತರ ಎದ್ದಿರುವ ಅಸಮಾಧಾನಕ್ಕೆ ಪ್ರತಿಕ್ರಿಯಿಸಿ ''ಆಪರೇಷನ್ ಕಮಲದಿಂದ ಬಂದ ಬಹುತೇಕ ಎಲ್ಲ ಸಚಿವರಿಗೂ ಡಮ್ಮಿ ಖಾತೆ ನೀಡಲಾಗಿದೆ,'' ಎಂದು ವ್ಯಂಗ್ಯವಾಡಿದ್ದಾರೆ. ''ಎಂಟಿಬಿಗೆ ವಸತಿ ಖಾತೆ ಇತ್ತು. ಈಗ ಅಬಕಾರಿ ಖಾತೆ ಕೊಟ್ಟು ನಿರ್ಲಕ್ಷ್ಯ ಮಾಡಲಾಗಿದೆ. ಸುಧಾಕರ್, ಗೋಪಾಲಯ್ಯ ಅವರಿಗೆ ನೀಡಿದ್ದ ಉತ್ತಮ ಖಾತೆಯನ್ನೂ ಕಿತ್ತುಕೊಂಡಿದ್ದಾರೆ. ವಲಸಿಗರ ಅತೃಪ್ತಿ ನೋಡಿದರೆ ರಾಜ್ಯ ಸರಕಾರವು ವೆಂಟಿಲೇಟರ್‌ನಲ್ಲಿ ನಡೆಯುತ್ತಿದೆ,'' ಎಂದು ಡಿಕೆಶಿ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲವಾಗುವ ಖಾತೆಯನ್ನು ಬಯಸಿದ್ದೆ. ಆದರೆ, ಏಕಾಏಕಿಯಾಗಿ ಬದಲಾಯಿಸಿದಾಗ ಬೇಸರ ಆಗುವುದು ಸಹಜ. ಹಾಗೆಂದ ಮಾತ್ರಕ್ಕೆ ನನಗೆ ಇದು ಡಿಮೋಷನ್ ಎಂದು ತಿಳಿಯಬೇಕಿಲ್ಲ. ವೈದ್ಯಕೀಯ ಶಿಕ್ಷಣ ಖಾತೆ ಕೂಡ ಪ್ರಭಾವಿಯಾದುದ್ದು,'' ಎಂದು ಹೇಳಿದರು.

### 'ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು'

**ಬೆಂಗಳೂರು:** ಆರೋಗ್ಯ ಮತ್ತು ವೈದ್ಯ ಶಿಕ್ಷಣ ಖಾತೆಗಳನ್ನು ಒಬ್ಬರಿಗೇ ನೀಡಬೇಕು. ಯಾರಿಗೇ ಈ ಎರಡು ಖಾತೆಗಳನ್ನು ನೀಡಿದರೂ ಆದೀತು. ಆದಕ್ಕೆ ಅಭ್ಯಂತರವಿಲ್ಲ, ಕೋವಿಡ್ ಲಸಿಕೆ ವಿತರಣೆ ಸಂದರ್ಭದಲ್ಲಿ ರಾಜ್ಯದ ಹಿತ ಮುಖ್ಯವಾಗಿದೆ. ಇದರಲ್ಲಿ ವೈಯಕ್ತಿಕ ಹಿತಾಸಕ್ತಿಯೇನೂ ಇಲ್ಲ ಎಂದು ಸಚಿವ ಡಾ. ಕೆ. ಸುಧಾಕರ್ ಹೇಳಿದ್ದಾರೆ.

**ಆರೋಗ್ಯ, ವೈದ್ಯ ಒಬ್ಬರಿಗೇ ಇರಲಿ: ಸಚಿವ ಸುಧಾಕರ್**

ಖಾತೆ ಹಂಚಿಕೆ ಪ್ರಕ್ರಿಯೆ ಹಿನ್ನೆಲೆಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ ''ಯಾರಿಗಾದರೂ ಸರಿ. ಈ ಎರಡು ಖಾತೆಗಳನ್ನು ಒಬ್ಬರೇ ನಿಭಾಯಿಸುವಂತಾಗಲಿ. ಈ ಬಗ್ಗೆ ಸಿಎಂ ಬಳಿಯೇ ಮನವಿ ಮಾಡಿಕೊಳ್ಳುತ್ತೇನೆ. ಈಗಿನ ಸಂದರ್ಭದಲ್ಲಿ ಈ ಖಾತೆಗಳನ್ನು ಬೇರ್ಪಡಿಸುವುದು ಸೂಕ್ತವಲ್ಲ. ಈಗ ಲಸಿಕೆ ಉಸ್ತುವಾರಿ ಯಾರೆಂಬ ಪ್ರಶ್ನೆಗೂ ನನ್ನ ಬಳಿ ಉತ್ತರವಿಲ್ಲ,'' ಎಂದಿದ್ದಾರೆ.

**ರಿಸ್ಕ್ ತೆಗೆದುಕೊಂಡಿದ್ದೇವೆ:** ''ಖಾತೆ ವಿಚಾರದಲ್ಲಿ ಸಚಿವ ಅಶೋಕ್ ನನಗೆ ಕರೆ ಮಾಡಿಲ್ಲ, ಬಸವರಾಜ ಬೊಮ್ಮಾಯಿಯವರು ಕರೆ ಮಾಡಿದ್ದರು. ಅವರೊಂದಿಗೆ ಮಾತನಾಡಿದ್ದೇನೆ. ಆದರೆ, ನಾನು ರಾಜಕೀಯವಾಗಿ ಸೆಲ್ಫ್ ಸುಸೈಡ್ ಅಟೆಮ್ಟ್ ಮಾಡಿ ಬಂದವನು. ನಾವೆಲ್ಲ ಎಂತಹ ಪರಿಸ್ಥಿತಿಯಲ್ಲಿ ರಿಸ್ಕ್ ತೆಗೆದುಕೊಂಡು ಬಿಜೆಪಿಗೆ ಬಂದಿದ್ದೇವೆ ಎನ್ನುವುದು ಎಲ್ಲರಿಗೂ ತಿಳಿದಿದೆ. ಗೋಪಾಲಯ್ಯ ತಮ್ಮ ಖಾತೆಯಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡಿದ್ದರು. ಎಂ.ಟಿ.ಬಿ. ನಾಗರಾಜ್, ನಾರಾಯಣ ಗೌಡರೂ ನನ್ನ ಬಳಿ ಬಂ[illegible] ನೋವು ತೋಡಿಕೊಂಡಿದ್ದಾರೆ. ಸರಕಾರ ರಚನೆಯಾಗುವಾಗ ನಡೆದ ವಿಶೇಷ ಘಟನಾವಳಿ ನೆನಪಿಸಿಕೊಳ್ಳಬೇಕು. ಆ ಸಂದರ್ಭದಲ್ಲಿ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕಾಗುತ್ತದೆ. ನಾವು ಅದನ್ನು ನಂಬಿ ಬಂದಿದ್ದೇವೆ,'' ಎಂದು ತಿಳಿಸಿದ್ದಾರೆ.